3. **ಪಶುವೈದ್ಯ ಸಹಾಯಕರು :** ನೇರ ನೇಮಕಾತಿ ಮೂಲಕ 642 ಪಶುವೈದ್ಯ ಸಹಾಯಕರ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿದೆ. ನೇಮಕಾತಿ ಸಂದರ್ಭದಲ್ಲಿ ಬಸವಕಲ್ಯಾಣ ಕ್ಷೇತ್ರದಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮವಹಿಸಲಾಗುವುದು.

4. **ಡಿ ದರ್ಜೆ' ನೌಕರರು : ಖಾಲಿ ಇರುವ 'ಡಿ ದರ್ಜೆ'** ಹುದ್ದೆಗಳನ್ನು ಆದ್ಯತೆ ಮೇರೆಗೆ ಹೊರ ಗುತ್ತಿಗೆ ಮುಖಾಂತರ ತುಂಬಲು ಕ್ರಮ ವಹಿಸಲಾಗುವುದು.

ಬೀದರ್ ಜಿಲ್ಲೆಯ ಪಶುವೈದ್ಯ ಶಾಲೆಗೆ ಔಷಧಿ ಸರಬರಾಜು ಮಾಡುವ ಬಗ್ಗೆ

274 (663) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಬೀದರ್ ಜಿಲ್ಲೆಯ ವಿವಿಧ ಪಶುವೈದ್ಯ ಆಸ್ಪತ್ರೆಗಳು/ಚಿಕಿತ್ಸಾಲಯಗಳಿಗೆ ಎಷ್ಟು ಮೊತ್ತದ ಪಶುವೈದ್ಯ ಔಷಧಿಗಳನ್ನು ಸರಬರಾಜು ಮಾಡಲಾಗಿದೆ (ಆಸ್ಪತ್ರೆವಾರು ವಿವರಗಳನ್ನು ಒದಗಿಸುವುದು);

ಆ) ಜಿಲ್ಲೆಯಲ್ಲಿ ಪಶುವೈದ್ಯ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಇರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ, ಮುಂಬರುವ ದಿನಗಳಲ್ಲಿ ಈ ಕೊರತೆಯನ್ನು ನೀಗಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಜಿಲ್ಲೆಯ ವಿವಿಧ ಪಶುವೈದ್ಯ ಆಸ್ಪತ್ರೆಗಳು/ ಚಿಕಿತ್ಸಾಲಯಗಳಿಗೆ ಸರಬರಾಜಾದ ಔಷಧಿಗಳ ಮೊತ್ತದ ವಿವರಗಳನ್ನು ಅನುಬಂಧ– 1 ರಲ್ಲಿ ನೀಡಿದೆ.

ಆ) ಸ್ವಲ್ಪ ಮಟ್ಟಿಗೆ ಕೊರತೆ ಇದೆ. ರಾಜ್ಯವಲಯ ಹಾಗೂ ಜಿಲ್ಲಾವಲಯಗಳಲ್ಲಿ ಲಭ್ಯವಿರುವ ಅನುದಾನದಲ್ಲಿ ಔಷಧಿಗಳನ್ನು ಖರೀದಿಸಿ ಜಿಲ್ಲೆಯ ಎಲ್ಲಾ ಸಂಸ್ಥೆಗಳಿಗೆ ವಿತರಿಸಲಾಗಿದೆ.

ಇ) ಔಷಧಿಗಳನ್ನು ಸರಬರಾಜು ಮಾಡಲು ಅಗತ್ಯ ಕ್ರಮ ವಹಿಸಲಾಗುವುದು.

ಅನುಬಂಧ – 1

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ.ಬಸವರಾಜ ಪಾಟೀಲ್ ಅಟ್ಟೂರ ರವರ ಪ್ರಶ್ನೆ ಸಂಖ್ಯೆ:663 ಕ್ಕೆ ಮಾಹಿತಿ.

ಬೀದರ್ ಜಿಲ್ಲೆಯ ವಿವಿಧ ಪಶುವೈದ್ಯಕೀಯ ಸಂಸ್ಥೆಗಳಿಗೆ ಸರಬರಾಜಾದ ಔಷಧಿಗಳ ಮೊತ್ತ

ವರ್ಷ	ಪಶುಆಸ್ಪತ್ರೆ	ಪ.ಚಿ/ಸಂ.ಪ.ಚಿ/ ಪ್ರಗ್ರಾಯೋ	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ
2007–08	64,150–00	47985–00	16170–00
2008–09	69140–00	51910–00	17490–00
2009–10	75160–00	56220–00	18935–00

ಷರಾ: ಪ.ಚಿ = ಪಶುಚಿಕಿತ್ಸಾಲಯ
ಸಂ.ಪ.ಚಿ = ಸಂಚಾರಿ ಪಶುಚಿಕಿತ್ಸಾಲಯ
ಪ್ರಗ್ರಾಯೋ= ಪ್ರಧಾನ ಗ್ರಾಮೀಣ ಯೋಜನೆ.

ಚಿತ್ರದುರ್ಗದಲ್ಲಿ ಕಲಾ & ವಿಜ್ಞಾನ ವಿಭಾಗದ ಸ್ನಾತಕೊತ್ತರ ಕೇಂದ್ರಕ್ಕೆ ಕಟ್ಟಡದ ಕೊರತೆ

276 (694) ಶ್ರೀ ಬಸವರಾಜನ್ ಎಸ್.ಕೆ. (ಚಿತ್ರದುರ್ಗ) : ಮಾನ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗದಲ್ಲಿ ಇರುವ ಕಲಾ ಮತ್ತು ವಿಜ್ಞಾನ ಎರಡು ವಿಭಾಗಗಳಲ್ಲಿ ಸ್ನಾತಕೋತ್ತರ ಕೇಂದ್ರ ತೆರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;